ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 1821 (2196)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : BMRDA ನಲ್ಲಿ Change of Land use ಬಗ್ಗೆ

(ಅ) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ (BMRDA) ವನ್ನು ಯಾವಾಗ ಸ್ಥಾಪನೆ ಮಾಡಲಾಯಿತು ; ಇದರ ಉದ್ದೇಶಗಳೇನು; (ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಪ್ರಾಧಿಕಾರ ಯಾವ-ಯಾವ ಉದ್ದೇಶಗಳಿಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿ ಮಾಡಿ ಹಸ್ತಾಂತರಿಸಲು ಅಧಿಕಾರ ಹೊಂದಿದೆ ; (ವಿವರವಾಗಿ ಉದ್ದೇಶವಾರು ಮಾಹಿತಿ ಒದಗಿಸುವುದು)

(ಇ) ಭೂ ಉಪಯೋಗ/ಭೂಮಿ ಉಪಯೋಗ (Land use) ಎಂದರೇನು ; ಎಷ್ಟು ವಿಧವಾದ ಭೂ ಉಪಯೋಗಗಳಿವೆ ; ಸದರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಭೂ ಉಪಯೋಗಗಳಾವುವು ;

(ಈ) ಭೂ ಉಪಯೋಗ/ಭೂಮಿ ಉಪಯೋಗ ಬದಲಾವಣೆ (Change of Land use) ಅಂದರೇನು ; ಅವುಗಳಲ್ಲಿ ಎಷ್ಟು ವಿಧ ; ಅವು ಯಾವುವು ; ಪ್ರಾಧಿಕಾರದ ವ್ಯಾಪ್ತಿಯಲ್ಲಿ ಎಷ್ಟು ವಿವಿಧ (Change of Land use) ಬರುತ್ತದೆ ; (ವಿವರವಾದ ಮಾಹಿತಿ ನೀಡುವುದು)

(ಉ) ಜನವರಿ 2018-19 ರಿಂದ 2020-2021 ರವರೆಗೆ ಸದರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಎಷ್ಟು Change of Land use ಪ್ರಕರಣಗಳು ನಡೆದಿವೆ ; (ವರ್ಷವಾರು ಬಡಾವಣೆವಾರು ವಿವರವಾದ ಮಾಹಿತಿ ನೀಡುವುದು)

(ಊ) Change of Land use ಮಾಡುವ ಅಧಿಕಾರವು ಪ್ರಾಧಿಕಾರಕ್ಕಿದೆಯೇ ಅಥವಾ ಸರ್ಕಾರಕ್ಕಿದೆಯೇ ;

(ಋ) ಕಳೆದ 5 ವರ್ಷಗಳಲ್ಲಿ ಸದರಿ ಪ್ರಾಧಿಕಾರದಿಂದ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ? (ವಿವರವಾದ ಮಾಹಿತಿ ನೀಡುವುದು)